# ಪಕ್ಷಾಂತರ ನಿಷೇಧ ಕಾಯ್ದೆ

# 10ನೇ

# ಅನುಸೂಚಿ–

# Art-102 & 191

downloaded from: www.kpscvaani.com




**ಕೃಪೆ–ಸ್ಪರ್ಧಾಕ್ರಾಂತಿ ಪ್ರಕಾಶನದ ಕೆ.ಎ.ಎಸ್ ಅಧಿಕಾರಿಯಾಗಿರುವ ಅಶೋಕ ಮಿರ್ಜಿರವರಿಂದ ರಚಿತವಾದ ಭಾರತದ ಸಂವಿಧಾನ ಪುಸ್ತಕ**

downloaded from: www.kpscvaani.com

# ಪಕ್ಷಾಂತರ ನಿಷೇಧ ಕಾಯ್ದೆ ಹೇಗೆ ಜಾರಿಗೆ ಬಂತು?

1967ರಲ್ಲಿ ಹರಿಯಾಣದ ಶಾಸಕ **ಗಯಾಲಾಲ್** ಎಂಬುವವರು ಒಂದೇ ದಿನ ಮೂರು ಪಕ್ಷವನ್ನು ಬದಲಾಯಿದ್ದರು. ಅನಂತರ ಈ ಪಕ್ಷಾಂತರ ತಡೆಯಲು ಮೊದಲ ಪ್ರಯತ್ನ ನಡೆದಿದ್ದು 1968ರಲ್ಲಿ.ಲೋಕ ಸಭಾ ಸದಸ್ಯರಾದ ಪಿ ಎ ವೆಂಕಟಸುಬ್ಬಯ್ಯ ಈ ಉದ್ದೇಶದ ಖಾಸಗಿ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿದ್ದರು.ಅದರ ಪರಿಣಾಮ ನೇಮಕಗೊಂಡಿದ್ದು ವೈ ಬಿ ಚೌವ್ಹಾಣ್ ಸಮಿತಿ. ಆದರೆ ಅದು ನೀಡಿದ ವರದಿ ಬಗ್ಗೆ ಹೆಚ್ಚು ಚರ್ಚೆ ನಡೆಯಲಿಲ್ಲ. ನಂತರ ಪಕ್ಷಾಂತರಿಗಳಿಗೆ ಲಗಾಮು ಹಾಕುವ ಉದ್ದೇಶದಿಂದ ರಾಜೀವ್ ಗಾಂಧಿ ಅವರು ಪ್ರಧಾನಿಯಾಗಿದ್ದ ಅವಧಿಯಲ್ಲಿ ಅಂದರೆ 1985ರ ಜನವರಿ 30ರಂದು ಪಕ್ಷಾಂತರ ನಿಷೇಧ ಕಾಯಿದೆಯನ್ನು ಜಾರಿಗೆ ತಂದರು. ಇದನ್ನು ಸಂವಿಧಾನದ 52ನೇ ತಿದ್ದುಪಡಿಯಲ್ಲಿ 10ನೇ ಅನಸೂಚಿಯಲ್ಲಿ ಸೇರ್ಪಡೆ ಮಾಡಲಾಯಿತು.

**downloaded from: www.kpscvaani.com**

## ●ಜಾರಿ ಮಾಡುವ ಅಧಿಕಾರ

ಒಬ್ಬ ಸದಸ್ಯನು ಪಕ್ಷಾಂತರ ಮಾಡಿದ್ದಾನೋ ಇಲ್ಲವೇ ಎಂಬ ನಿರ್ಣಯವನ್ನು ಸಭಾಧ್ಯಕ್ಷರಾದ ಸ್ಪೀಕರ್ ಅವರು ಪಕ್ಷಾಂತರ ನಿಷೇಧ ಕಾಯಿದೆ ಅನ್ವಯ ತೀರ್ಮಾನ ಕೈಗೊಳ್ಳುವ ಅಧಿಕಾರ ಹೊಂದಿರುತ್ತಾರೆ.

## ●ಯಾವುದು ಪಕ್ಷಾಂತರ ?

1. ರಾಜಕೀಯ ಪಕ್ಷದಿಂದ ಆಯ್ಕೆಯಾಗುವ ಯಾವುದೇ ಶಾಸಕ/ಸಂಸದರು, ತಾನು ಆಯ್ಕೆಯಾದ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡದೆ, ಇನ್ನೊಂದು ರಾಜಕೀಯ ಪಕ್ಷ ಕ್ಕೆ ಸೇರಿದರೆ ಅದು ಪಕ್ಷಾಂತರ. ಅಂಥವರನ್ನು ಅನರ್ಹಗೊಳಿಸಬಹುದು.

2. ಮತದಾನದ ಸಮಯದಲ್ಲಿ ಹಾಜರಿರಲೇಬೇಕು ಎಂದು ರಾಜಕೀಯ ಪಕ್ಷವೊಂದು ತನ್ನ ಶಾಸಕ/ಸಂಸದರಿಗೆ ಲಿಖಿತ ಸೂಚನೆ(ವಿಪ್) ಜಾರಿಗೊಳಿಸಿದ ಬಳಿಕವೂ, ಅದನ್ನು ಉಲ್ಲಂಘನೆ ಮಾಡುವವ ಹಾಗೂ ಮತದಾನದಿಂದ ದೂರ ಉಳಿಯುವವರು ಪಕ್ಷಾಂತರಿಗಳು. ಇಂಥವರನ್ನು ಅನರ್ಹಗೊಳಿಸಬಹುದು.

**downloaded from: www.kpscvaani.com**

# ●ಯಾವುದು ಪಕ್ಷಾಂತರವಲ್ಲ ?

1. ಒಬ್ಬ ಶಾಸಕನು ತನ್ನ ಮೂಲ ಪಕ್ಷದ ಸಮೇತ ಮತ್ತೊಂದು ಪಕ್ಷ ಕ್ಕೆ ಸೇರಿ ತಾನು ಮತ್ತು ಉಳಿದ ಮೂಲ ರಾಜಕೀಯ ಪಕ್ಷದ ಸದಸ್ಯರು ಆ ಹೊಸ ಪಕ್ಷದ ಸದಸ್ಯರಾಗಿದ್ದೆವೆ ಎಂದು ಘೋಷಿಸಿದರೆ ಅದು ಪಕ್ಷಾಂತರ ಅಲ್ಲ.

2. ಸಭಾಪತಿ / ಅಧ್ಯಕ್ಷರು ತಾವು ಪ್ರತಿನಿಧಿಸುವ ಪಕ್ಷಕ್ಕೆ ರಾಜೀನಾಮೆ ನೀಡುವುದು ಪಕ್ಷಾಂತರ ಎನಿಸುವುದಿಲ್ಲ.

3. ಸಂವಿಧಾನದ 91ನೇ ತಿದ್ದುಪಡಿ ಕಾಯ್ದೆ-2003ರ ಅನ್ವಯ ಯಾವುದೇ ಒಂದು ಪಕ್ಷದ ಕನಿಷ್ಠ ಮೂರನೇ ಎರಡರಷ್ಟು ಶಾಸಕರು/ಸಂಸದರು ಬೇರೆ ಪಕ್ಷದ ಜತೆ ವಿಲೀನವಾದರೆ, ಪ್ರತ್ಯೇಕ ರಾಜಕೀಯ ಗುಂಪು ಮಾಡಿಕೊಂಡರೆ ಅದು ಪಕ್ಷಾಂತರವಲ್ಲ. (2004ರವರೆಗೆ ಮೂರನೇ ಒಂದರಷ್ಟು ಶಾಸಕರು ಪಕ್ಷ ಇಬ್ಭಾಗ ಮಾಡಿದರೆ ಎಂದಿತ್ತು)

**downloaded from: www.kpscvaani.com**

## ●ಮತಕ್ಕೆ ಮೌಲ್ಯ,ಸದಸ್ಯತ್ವಕ್ಕೆ ಶಿಕ್ಷೆ :

ಕಾಯಿದೆ ಪ್ರಕಾರ ಯಾವುದೇ ಶಾಸಕ, ಸಂಸದ ತನ್ನ ಪಕ್ಷದ ವಿಪ್ ಉಲ್ಲಂಘಿಸಿ ಮತ ಚಲಾಯಿಸಿದ ಬಳಿಕವಷ್ಟೇ ಸ್ಪೀಕರ್ ಕ್ರಮ ಕೈಗೊಳ್ಳಬಹುದು. ಹಾಗಾಗಿ, ವಿಪ್ ಉಲ್ಲಂಘನೆಗಾಗಿ ಪಕ್ಷಾಂತರಿ ಸದಸ್ಯರ ಸದಸ್ಯತ್ವ ರದ್ದಾದರೂ, ಅವರು ಚಲಾಯಿಸಿದ ಮತಕ್ಕೆ ಮೌಲ್ಯ ಇರುತ್ತದೆ

## ●ಕಾನೂನು ಹೋರಾಟ :

1992ರಿಂದ ಸಭಾಪತಿಯವರ ನಿರ್ಣಯವನ್ನು ಪ್ರಶ್ನೆ ಮಾಡುವ ಅವಕಾಶವನ್ನು ಸುಪ್ರೀಂಕೋರ್ಟ್ ನೀಡಿದೆ. ಹೀಗಾಗಿ, ಅನರ್ಹತೆ ವಿರುದ್ಧ ಶಾಸಕರು/ಸಂಸದರು ಕೋರ್ಟ್ ಮೆಟ್ಟಿಲೇರಬಹುದು. ಉದಾ : 1994ರ **ರವಿನಾಯಕ್ ವರ್ಸಸ್ ಯೂನಿಯನ್ ಆಫ್ ಇಂಡಿಯಾ** ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಪಕ್ಷಾಂತರ, ವಿಪ್ ಉಲ್ಲಂಘನೆ ಮಾತ್ರವಲ್ಲದೇ ಶಾಸಕರ ನಡವಳಿಕೆಯನ್ನು ಸಹ ಪಕ್ಷ ವಿರೋಧಿ ಚಟುವಟಿಕೆ ಎಂದು ಪರಿಗಣಿಸಿ ಅಂತಹ ಶಾಸಕರ ವಿರುದ್ಧ ಕ್ರಮ ಕೈಗೊಳ್ಳಬಹುದು ಎಂದು ಹೇಳಿದೆ. ಕ್ರಮ ಕೈಗೊಂಡ ಬಳಿಕ ಶಾಸಕರ ನಡೆ ಪಕ್ಷ ವಿರೋಧಿಯಾಗಿತ್ತು ಎಂದು ಹೇಳಲು ಪಕ್ಷ ಸಾಕ್ಷಾಧಾರವನ್ನು ನೀಡಿ ಆರೋಪವನ್ನು ಸಾಬೀತುಪಡಿಸಬೇಕಾಗುತ್ತದೆ.

**downloaded from: www.kpscvaani.com**

# ●ಅನರ್ಹತೆಯ ಸಂದರ್ಭಗಳು

1. ವಿಧಾನಸಭಾ ಸದಸ್ಯರು ತಮ್ಮ ಸ್ವಇಚ್ಛೆಯಿಂದ ರಾಜಕೀಯ ಪಕ್ಷವೊಂದರ ಸದಸ್ಯತ್ವಕ್ಕೆ ರಾಜೀನಾಮೆ ನೀಡದೆ ಮತ್ತೊಂದು ಪಕ್ಷ ಸೇರಿದರೆ ಅನರ್ಹತೆ ಮಾಡಬಹುದು.

2. ವಿಪ್ ಅನುಗುಣವಾಗಿ ಮತ ಹಾಕದಿದ್ದರೆ ಅಥವಾ ಮತದಾನ ಪ್ರಕ್ರಿಯೆಗೆ ಗೈರಾದರೆ ಅನರ್ಹತೆ ಮಾಡಬಹುದು....

3. ವಿಶ್ವಾಸಮತ ಯಾಚನೆಗೂ 15 ದಿನ ಮೊದಲು ಪಕ್ಷದಿಂದ ಪೂರ್ವಾನುಮತಿ ಪಡೆದ ಸದಸ್ಯರು ವಿಪ್ ಅನುಗುಣವಾಗಿ ಮತ ಹಾಕದಿದ್ದರೆ ಅಥವಾ ಮತದಾನ ಪ್ರಕ್ರಿಯೆಗೆ ಗೈರಾದರೆಅನರ್ಹತೆ ಭೀತಿಯಿಂದ ಬಚಾವಾಗುತ್ತಾರೆ.

4. ಸ್ವತಂತ್ರ ಸದಸ್ಯರೊಬ್ಬರು ಚುನಾವಣೆ ಬಳಿಕ ರಾಜಕೀಯ ಪಕ್ಷ ಸೇರಿದಾಗ ಅನರ್ಹತೆ ಮಾಡಬಹುದು.

5. ಲೋಕಸಭೆ & ವಿಧಾನಸಭೆಯ ನಾಮಕರಣಗೊಂಡ

ಸದಸ್ಯರು, ನಾಮಕರಣಗೊಂಡ 6 ತಿಂಗಳ ನಂತರ ಯಾವುದೇ ಪಕ್ಷವನ್ನು ಸೇರಿದರೆಅನರ್ಹತೆ ಮಾಡಬಹುದು....ನಾಮಕರಣಗೊಂಡ 6 ತಿಂಗಳ ಒಳಗೆ ಯಾವುದೇ ಪಕ್ಷವನ್ನುಸೇರಿದರೆಅನರ್ಹತೆ ಮಾಡಲು ಬರುವುದಿಲ್ಲ.

downloaded from: www.kpscvaani.com

# ಅನರ್ಹರಾದರೆ ಏನಾಗುತ್ತೆ?

1. ಸರ್ಕಾರಿ ಹುದ್ದೆ ಅಲಂಕರಿಸುವಂತಿಲ್ಲ
2. ಉಪ ಚುನಾವಣೆಯಲ್ಲಿ ಸ್ಪರ್ಧಿಸುವಂತಿಲ್ಲ & ಮಂತ್ರಿ ಆಗಲು ಬರುವುದಿಲ್ಲ.
3. ಅಪರಾಧ ಪ್ರಕರಣವೊಂದರಲ್ಲಿ ಶಾಸಕರು 2 ವರ್ಷಕ್ಕಿಂತ ಹೆಚ್ಚು ಅವಧಿಗೆ ಶೀಕ್ಷೆಗೊಳಗಾದರೆ ಪ್ರಜಾಪ್ರತಿನಿಧಿ ಕಾಯ್ದೆಯ ಸೆಕ್ಷನ್ 8ರ ಅಡಿ ಅವರು 6ವರ್ಷ ನಿಷೇಧಕ್ಕೆ ಒಳಗಾಗುತ್ತಾರೆ. ಶಿಕ್ಷೆಗೊಳಗಾದ ತಕ್ಷಣ ಅವರ ಶಾಸಕತ್ವ ಹೋಗುತ್ತದೆ ಮತ್ತು 6 ವರ್ಷ ಅವರು ಚುನಾವಣೆಗೆ ಸ್ಪರ್ಧಿಸುವಂತಿಲ್ಲ. ಆದರೆ ಪ್ರಜಾಪ್ರತಿನಿಧಿ ಕಾಯ್ದೆಯ ಸೆಕ್ಷನ್ 8(4)ರ ಪ್ರಕಾರ ಇಂಥವರು ಅನರ್ಹರಾದ 3 ತಿಂಗಳ ಒಳಗೆ ಮೇಲ್ಮನವಿ ಸಲ್ಲಿಸಬಹುದು.

downloaded from: www.kpscvaani.com

# ರಾಜಿನಾಮೆ & ಪಕ್ಷಾಂತರ

ಸದನದ ಕಾರ್ಯವಿಧಾನದ ನಿಯಮಗಳ ಪ್ರಕಾರ, (1) ಸದನದಲ್ಲಿ ಒಬ್ಬರ ಸ್ಥಾನಕ್ಕೆ ರಾಜೀನಾಮೆ ನೀಡಲು ಇಚ್ಚಿಸುವ ಸದಸ್ಯರೊಬ್ಬರು ಸಭಾಪತಿ ಅವರನ್ನು ಉದ್ದೇಶೀಸಿ ಲಿಖಿತವಾಗಿ ತಿಳಿಸಬೇಕು.ಸದಸ್ಯರೊಬ್ಬರು ರಾಜೀನಾಮೆ ಪತ್ರವನ್ನು ವೈಯಕ್ತಿಕವಾಗಿ ಸಭಾಪತಿನೀಡಿದರೆ ಮತ್ತು ರಾಜೀನಾಮೆ ಸ್ವಯಂಪ್ರೇರಿತ ಮತ್ತು ನಿಜವಾದದ್ದು ಇದ್ದರೆ ಸಭಾಪತಿತಕ್ಷಣವೇ ರಾಜೀನಾಮೆಯನ್ನು ಸ್ವೀಕರಿಸಬಹುದು.ಸಭಾಪತಿರಾಜೀನಾಮೆ ಪತ್ರವನ್ನು ಅಂಚೆ ಮೂಲಕ ಅಥವಾ ಬೇರೊಬ್ಬರ ಮೂಲಕ ಸ್ವೀಕರಿಸಿದರೆ, ರಾಜೀನಾಮೆ ಸ್ವಯಂಪ್ರೇರಿತ ಮತ್ತು ನಿಜವಾದದ್ದು ಎಂದು ತೃಪ್ತಿಪಡಿಸಿಕೊಳ್ಳಲು ಸಭಾಪತಿಅಂತಹ ವಿಚಾರಣೆಯನ್ನು ಮಾಡಬಹುದು.ಸಭಾಪತಿವಿಚಾರಣೆ ನಡೆಸಿದ ನಂತರ ರಾಜೀನಾಮೆ ಸ್ವಯಂಪ್ರೇರಿತ ಅಥವಾ ನಿಜವಾದದ್ದಲ್ಲ ಎಂದು ತೃಪ್ತಿಪಟ್ಟರೆ, ಅವರು ರಾಜೀನಾಮೆಯನ್ನು ಅಂಗೀಕರಿಸುವುದಿಲ್ಲ. ರಾಜೀನಾಮೆ ಪತ್ರವನ್ನು ಅಂಗೀಕರಿಸುವ ಮೊದಲೇ ಸದಸ್ಯರು ಯಾವುದೇ ಸಮಯದಲ್ಲಿ ಅದನ್ನು ಹಿಂಪಡೆಯಬಹುದು.

downloaded from: www.kpscvaani.com

(2) ಸಭಾಪತಿ, ಸದಸ್ಯರ ರಾಜೀನಾಮೆಯನ್ನು ಸಭಾಪತಿ ನಂತರ, ಸದಸ್ಯರಿಂದ ಸ್ಥಾನದ ರಾಜೀನಾಮೆ ಮತ್ತು ಅಂತಹ ರಾಜೀನಾಮೆಯನ್ನು ಸ್ವೀಕರಿಸುವ ಬಗ್ಗೆ ಸದನಕ್ಕೆ ತಿಳಿಸಬೇಕು. ಸದನವು ಅಧಿವೇಶನದಲ್ಲಿ ಇಲ್ಲದಿದ್ದಾಗ, ಅದನ್ನು ನಂತರದ ಅಧೀವೇಶನದ ಸಮಯದಲ್ಲಿ ಕೂಡಲೇ ಸದನಕ್ಕೆ ತಿಳಿಸಬೇಕು. ಮೂಲತಃ ಸಂವಿಧಾನವು ರಾಜೀನಾಮೆ ಅಂಗೀಕಾರಕ್ಕೆ ಯಾವುದೇ ನಿಬಂಧನೆಯನ್ನು ಹೊಂದಿರಲಿಲ್ಲ ಮತ್ತು ರಾಜೀನಾಮೆ ಪ್ರಿಸ್ಯೈಡಿಂಗ್ ಅಧಿಕಾರಿ ಅಥವಾ ಸಚಿವಾಲಯ ಸ್ವೀಕರಿಸಿದಾಗ ಅದು ಅಂಗೀಕರಿಸಿದಂತಾಯಿತು ಎಂದು ಇದು ಸೂಚಿಸುತ್ತತ್ತು. ಆದರೆ ಅನ್ನು 33 ನೇ ಸಾಂವಿಧಾನಿಕ ತಿದ್ದುಪಡಿ ಕಾಯ್ದೆ 1974 ರ ಮೂಲಕ ಸದಸ್ಯರ ಯಾವುದೇ ಬಲವಂತದ ರಾಜೀನಾಮೆಯನ್ನು ಪರಿಶೀಲಿಸಲು, ಸಂಸತ್ತಿನ ಸದಸ್ಯರ ಅಥವಾ ಸದಸ್ಯರೊಬ್ಬರ ರಾಜೀನಾಮೆಯನ್ನು ಅಧಿಕೃತ ಗೊಳಿಸಲು ಸಂವಿಧಾನದ ವಿಧಿ 101 (3) (ಬಿ) ಮತ್ತು 190 (3) (ಬಿ)ಗೆ ಸೇರಿಸಲಾಗಿದೆ.

downloaded from: www.kpscvaani.com

# ಈ ಪುಸ್ತಕ ಅಮೆಜಾನ & ಫ್ಲಿಪ್‌ಕಾರ್ಟ್‌ದಲ್ಲಿ ಲಭ್ಯ

## ಸಾಧಕರ ಮಾತು



ಶ್ರೀ ರವಿ ಡಿ ಚೆನ್ನಣ್ಣನವರ., IPS

ಜ್ಞಾನದಾಹಿಗಳೇ, ಭವಿಷ್ಯದ ಮೆಟ್ಟಿಲುಗಳನ್ನು ಏರುತ್ತಿರುವ ಸ್ಪರ್ಧಾರ್ಥಿಗಳೇ, ಬದುಕಿನಲ್ಲಿ ಅಗಾಧ ಕನಸುಗಳನ್ನು ಕಟ್ಟಿಕೊಂಡು ನನಸು ಮಾಡಿಕೊಳ್ಳಲು ಸಿದ್ಧರಾಗಿರುವ ಯುವಕರೇ, ಭವ್ಯ ಭಾರತದ ಸೇವೆಗೆ ನೌಕರರಾಗಿ, ಅಧಿಕಾರಿಗಳಾಗಿ ತಮ್ಮ ಕಾಣಿಕೆ ನೀಡಲು ಮುಂದಾಗಿರುವ ಯುವ ಮಿತ್ರರೇ, ನಿಮ್ಮ ನಾಡಿಮಿಡಿತ, ಆಶೋತ್ತರ, ಅವಶ್ಯಕತೆ ಎಲ್ಲವನ್ನು ಪ್ರಾಯೋಗಿಕವಾಗಿ ತಾವೇ ನೇರವಾಗಿ ಅನುಭವಿಸಿರುವ ಮಾರ್ಗದರ್ಶನ ಮಾಡಿ ಹಲವಾರು ಶಿಷ್ಯರನ್ನು ಸೃಷ್ಟಿಸಿ ಒಂದು ವಿಭಿನ್ನ ಅಧಿಕಾರಿ ವರ್ಗವನ್ನು ಸಮಾಜಕ್ಕೆ ನೀಡುತ್ತಿರುವ **ಯುವ ಲೇಖಕರಾದ & ಕೆ.ಎ.ಎಸ್ ಅಧಿಕಾರಿಯಾಗಿರುವ ಶ್ರೀ ಅಶೋಕ ಮಿರ್ಜಿಯವರು** ಸತತ ಪರಿಶ್ರಮ, ಲಭ್ಯವಿರುವ ಎಲ್ಲಾ ಪುಸ್ತಕಗಳನ್ನು ಆಳವಾಗಿ ಅಧ್ಯಯನ ಮಾಡಿ, ಶೋಧಿಸಿ, ಸಂಶೋಧಿಸಿ ವಿಷಯಗಳನ್ನು ಮೌಲಿಕವಾಗಿ ಸಂಘಟಿಸಿ ಅಗತ್ಯವಾದ ಯಾವುದನ್ನೂ ಬಿಡದೆ, ಅನಗತ್ಯವಾಗಿ ಯಾವುದನ್ನೂ ಸೇರಿಸದೇ **ಪ್ರತಿ ಅಧ್ಯಾಯ, ಪರಿಕಲ್ಪನೆಗಳನ್ನು ನಿಖರವಾಗಿ ನಿರ್ದಿಷ್ಟವಾಗಿ ಗೊಂದಲಗಳಿಗೆ** ಅವಕಾಶವಿಲ್ಲದಂತೆ ನಿರೂಪಿಸಿದ್ದಾರೆ. ಪ್ರತಿ ಹಂತದಲ್ಲೂ ಹಿನ್ನೆಲೆಯುಳ್ಳ ವಿಷಯಗಳಿಗೆ ಹಿನ್ನೆಲೆಯನ್ನು ಅದು ಪಡೆದುಕೊಂಡಿರುವ **ವ್ಯಾಪ್ತಿಯನ್ನು** ವಿವರಿಸಿದ್ದಾರೆ, ಅವಶ್ಯವೆನಿಸಿದಲ್ಲೆಲ್ಲ **ಜಾಗತಿಕ ಮಾಹಿತಿ**ಯನ್ನು ಸೇರಿಸಿದ್ದಾರೆ. ಸಂದರ್ಭಕ್ಕನುಸಾರವಾಗಿ ಜಾಗತಿಕ ಸಂವಿಧಾನದ ವಿಷಯಗಳನ್ನು **ಸಮನ್ವಯ**ಗೊಳಿಸಿದ್ದಾರೆ, **ಹೋಲಿಕೆ** ಮಾಡಿದ್ದಾರೆ. ಎಲ್ಲಾ ಪರೀಕ್ಷೆಗಳಲ್ಲಿ ಕೇಳಲಾದ ಪ್ರಶ್ನೆಗಳನ್ನು ಉತ್ತರ ಸಹಿತ ಅಧ್ಯಾಯವಾರು ನೀಡಿ ನೈಜ ಚೌಕಟ್ಟನ್ನು ಒದಗಿಸಿದ್ದಾರೆ. ಇಷ್ಟೊಂದು ವ್ಯಾಪ್ತಿಯುಳ್ಳ ವಿಷಯದಲ್ಲಿ ಪದ ಪದವೂ, ವಾಕ್ಯ ವಾಕ್ಯಗಳೂ, ಪುಟಪುಟವೂ ಮೌಲ್ಯಯುತವೆನಿಸಿದೆ. ಪುಸ್ತಕ ಗುಣಮಟ್ಟದ ಜೊತೆ ಲೇಖಕರು ಎಂದಿಗೂ ರಾಜಿಯನ್ನು ಮಾಡಿಕೊಳ್ಳದೆ ಎಲ್ಲರ ಒಳಿತನ್ನು ಬಯಸಿ ಬರೆದಿರುವ ಲೇಖಕ **ಅಶೋಕ ಮಿರ್ಜಿ** ಅವರಿಗೆ ನನ್ನ ಅಭಿನಂದನೆಗಳು.

**"ಸೋಲಿನ ಹೊಡೆತವನ್ನು ತಾಳಿಕೊಂಡು ನೀವು ಹೇಗೆ ಪುಟಿದು ನಿಲ್ಲುವಿರಿ ಎಂಬುವುದರ ಮೇಲೆ ನಿಮ್ಮ ಯಶಸ್ಸು ನಿಂತಿದೆ"**

– ರವಿ ಡಿ. ಚೆನ್ನಣ್ಣನವರ., IPS

downloaded from: www.kpscvaani.com